Regd No. M 1299 SATYaVADI Founded 1917

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 31 ಸಂಚಿಕೆ 15] ಬುಧವಾರ 8-10-47 [ಬಿಡಿ ಪ್ರತಿ 3 ಪೈ

ಈ ದಿವಸ ನಿರ್ಧಾರವಾಗಲಿದೆ

ಅ 7 — ಚಿಕ್ಕಮಗಳೂರು ಜೈಲಿನಿಂದಕಾಂಗ್ರೆಸ್ ಮುಖಂಡರು ಬಂಧನದಿಂದ ಬಿಡುಗಡೆಯಾದರು. ಅನಂದೋತ್ಸಾಹಗಳಿಂದ ಪ್ರಜಾಗಣ ಅವರುಗಳಿಗೆ ಸು ಸ್ವಾಗತವಿತ್ತಿತ್ತು. ಕಾಂಗ್ರೆಸ್ ಅಧ್ಯಕ್ಷ ಮತ್ತು ನಾಯಕರು ಸೆರೆದಿದ್ದ ಮುಂದಿಗೆ ಸಂದೇಶವಿತ್ತರು. ಸತ್ಯಾಗ್ರಹ ನಡೆಯುವುದು ಬಿಡುವುದು ನಾಳೆ ಬೆಂಗಳೂರಿನಲ್ಲಿ ಸೇರುವ ಕಾರ್ಯಕಾರಿ ಸಮಿತಿಯಲ್ಲಿ ತೀರ್ಮಾನವಾಗುವುದು. ಅಲ್ಲಿಯವರೆಗೆ ಚಳುವಳಿ ನಡೆಯುತ್ತಿರುವುದು ಎಂದು ತಿಳಿಸಿದರು ಸತ್ಯಾಗ್ರಹ ನಿಲ್ಲಬಹುದೆಂದು ಅನೇಕರ ಅಭಿಪ್ರಾಯವಿದೆ.

ಅರವತ್ತು ಸಾವಿರ ಕೊಲೆ!

ಪಾಕೀಸ್ತಾನದಲ್ಲಿ ಸೇರಿರುವ ಭವಾಲ್ಪುರ ಸಂಸ್ಥಾನದಲ್ಲಿ ಸುಮಾರು ಅರವತ್ತು ಸಾವಿರ ಮಂದಿ ಹಿಂದೂ ಮತ್ತು ಸಿಕ್ಕರುಗಳ ಹತ್ಯೆ ನಡೆದಿದೆ

ಮುಸ್ಲಿಮೇತರರು ದೇಶಾಂತರಗತರಾಗಿ ಪಾಕೀಸ್ತಾನ ಪ್ರಭುತ್ವ ಸುದ್ದಿಗಳ ಮೇಲೆ ಕಾನೂನು ಜಾರಿಮಾಡಿತ್ತು.

ಪಾಕೀಸ್ತಾನ ಸ್ಥಾಪನೆಯಾದ ತರುಣದಲ್ಲೇ, ಆಗಸ್ಟ್ 19 ರಲ್ಲಿ ಹಿಂದೂ ಮತ್ತು ಸಿಕ್ಕರನ್ನು ಕೊಲ್ಲಿ. ಅವರ ಅಸ್ತಿಗಳೆಲ್ಲವೂ ಪಾಕೀಸ್ತಾನಕ್ಕೆ ಸೇರಿದ್ದು ಎಂದು ಹಸ್ತಪತ್ರ ಹಂಚಿದರು

ನೂರಾರುಗಟ್ಟಲೆ ಸ್ತ್ರೀಯರು ಬಲವಂತದಿಂದ ಮುಹಮದೀಯರಿಗೆ ಮದುವೆ ಮಾಡಲ್ಪಟ್ಟಿದ್ದಾರೆ.

ಸಾವಿರಾರು ಮಂದಿ ಮತಾಂತರಗೊಳಿಸಲ್ಪಟ್ಟಿದ್ದಾರೆ.

ಎಂಬತ್ತು ಸಾವಿರ ಮಂದಿ ಉಳಿದವರು ರಕ್ಷಣೆಗಾಗಿ ಭಾರತ ಸರ್ಕಾರವನ್ನು ಕೋರಿದ್ದಾರೆ.

ಕಾಂಗ್ರೆಸ್ ವಾರ್ತೆ

ಪ್ರ. ಪ್ರ. ಸಭೆ ಕಾಂಗ್ರೆಸ್ ಪಕ್ಷದ ನಾಯಕ ಶ್ರೀ ಕೆ. ಹನುಮಂತಯ್ಯನವರು ನಿನ್ನೆ ಬಿಡುಗಡೆಯಾದರು.

ಶ್ರೀಮನ್ಮಹಾರಾಜರೊಡನೆ ಕಾಂಗ್ರೆಸ್ ನಾಯಕರು ಭೇಟಿ ಮಾಡುವುದು ಅಗತ್ಯವೆಂದು ಶ್ರೀ ಎಲ್. ಎಸ್. ರಾಜು ಹೇಳಿದಾರೆ.

ಬೆಂಗಳೂರಿನ ಕಾಂಗ್ರೆಸ್ ಭವನವನ್ನು ಕಾಂಗ್ರೆಸ್ ಮುಖಂಡರ ಸುಪರ್ದಿಗೆ ಮಿಲಿಟರಿಯವರು ವಾಪಸ್ಸಿತ್ತಾರೆ.

ಮೈಸೂರು ಅ 8— ಇಲ್ಲಿಯ ಎರಡು ಸಾವಿರ ರೈಲ್ವೇ ಕೆಲಸಗಾರರಲ್ಲಿ 200 ಮಂದಿ ಕೆಲಸಕ್ಕೆ ಹೋದರೆಂದು ತಿಳಿಯಬಂದಿದೆ.

ನವದೆಹಲಿ ಅ 6— ದೆಹಲಿಯ ಮುನೀರಿಯೊಂದರಲ್ಲಿ ಬಿದ್ದ ನೆಲೆಮಾಳಿಗೆಯಲ್ಲಿ ಶಸ್ತ್ರಾಸ್ತ್ರ ಶಯಾಗಾರವಿತ್ತಿದ್ದುದನ್ನು ಪೋಲೀಸರು ಪತ್ತೇ ಹಚ್ಚಿದ್ದಾರೆ. ಆ ಬೀದಿಗಳಲ್ಲಿ ವಾಪ ಮಾಡುತ್ತಿದ್ದ ಹಿಂದೂಗಳಿಗೆ ಗೊತ್ತೇ ಇರಲಿಲ್ಲ!

ರಂಗೂನ್ ಅ 6— 1948 ನೇ ಇಸ್ವಿ ಜನವರಿ 2 ರಲ್ಲಿ ಬರ್ಮಾ ಸ್ವಾತಂತ್ರ್ಯ ಸ್ವೀಕಾರ ಮಾಡುವುದಾಗಿ ಬರ್ಮಾ ಮಂತ್ರಿಮಂಡಲ ನಿರ್ಧರಿಸಿದೆ.

ಭಾರತಕ್ಕೆ ಸಹಾಯ

ಸೈಗಾನ್ ಅ 6— ವಿಯಟ್ನಾಂ ಅಧ್ಯಕ್ಷ ಹೋಚಿಮಿಂಚ್ ಭಾರತದ ಜನತೆಯಲ್ಲಿ ನಿರಾಶ್ರಿತರ ಸಹಾಯಕ್ಕಾಗಿ ಹತ್ತು ಲಕ್ಷ ಫ್ರಾಂಕು ಕೊಡುವುದಾಗಿ ಪ್ರಮಂ ॥ ನೆಹರೂರವರಿಗೆ ತಿಳಿಸಿದ್ದಾರೆ.

ಜವಾಬ್ದಾರಿ ಸರಕಾರ

— 3 —

ಮಂತ್ರಿಗಳಲ್ಲಿಂದ ಮೇಲೆ ಅಧಿಕಾರಿಗಳಿಗೆ ವಹಿಸಿಕೊಟ್ಟು ದಪ್ತರಗಳ ವಿಷಯದಲ್ಲಿ ಅವರು ಪೂರ್ಣಾಧಿಕಾರವುಳ್ಳವರಾಗಿರಬೇಕು. ಈಗ ಸಲಹೆ ಮಾಡಲಾದ ಸುಧಾರಣೆಯು ಪ್ರಕಾರ 'ಮಂತ್ರಿ' ಹೆಸರನ್ನು ಹೊರದುವುದಕ್ಕಿಂತಲೂ ಹೆಚ್ಚಿನದು ಅಂದರೆ ಉಪಯುಕ್ತವಾದ ಯಾವ ಅಧಿಕಾರವೂ ಆ ಮಂತ್ರಿಗಳಿಗೆ ಇರುವುದಿಲ್ಲವೆಂಬುದು ಒಡೆದು ಕಾಣುತ್ತದೆ. ಸಾಧಾರಣವಾಗಿ ಸರಕಾರಿ ಅಡಳಿತವನ್ನು ನೋಡಲು ಅವರಿಗೆ ಅಧಿಕಾರವಿರುತ್ತೆಯಾದರೂ ತಮ್ಮ ಅಧಿಕಾರವನ್ನು ನಡೆಸುವುದರಲ್ಲಿ ಅವರಿಗೆ ಅಸಮರ್ಥತೆ ಅಷ್ಟೇ ಇರುತ್ತದೆ. 'ಪಬ್ಲಿಕ್ ಸರ್ವಿಸ್ ಕಮಿಷನ್' ಮತ್ತು 'ಮಿಲಿಟರಿ' ಇವೆರಡೂ ಕಾಯಿಟ್ಟ ವಿಷಯಗಳಲ್ಲಿ ಸೇರಿರುವುದರಿಂದ ಅಡಳಿತದ ಮೇಲೆ ಅವರಿಗೆ ಹತೋಟಿ ಇರುವುದಿಲ್ಲ. ತಮ್ಮ ಕೈ ಕೆಳಗಿನ ಅಧಿಕಾರಿಗಳು ಸಂಕಾರದ ತಿಸ್ತಿಗೆ ವಿರೋಧವಾಗಿ ನಡೆದರೆ (ಸಾಮಾನ್ಯವಾಗಿ ಎಲ್ಲರೂ ಮಂತ್ರಿಗಳಿಗೆ ವಿಧೇಯರಾಗಿಯೇ ಇರುತ್ತಾರೆ ಎಂದು ಇಟ್ಟುಕೊಳ್ಳಬಹುದು) ಅಂತಹ ಅಧಿಕಾರಿಗಳ ವಿಷಯದಲ್ಲಿ ಯಾವ ಕಾರ್ಯಕ್ರಮವನ್ನು ಜಾರಿ ಮಾಡಲು ಆ ಮಂತ್ರಿಗಳಿಗೆ ನೇರವಾಗಿ ಅಧಿಕಾರವಿಲ್ಲ. ಮಂತ್ರಿಗಳು 'ಪಬ್ಲಿಕ್ ಸರ್ವಿಸ್ ಕಮಿಷನ್' ನ ಮುಖ ನೋಡುತ್ತಾ ಕೂತಿರಬೇಕಾಗುತ್ತದೆ. 'ಸರ್ಕಾರದಲ್ಲಿ ನೌಕರಿ ಕೊಡುವುದು, ನೌಕರಿಯಲ್ಲಿ ಬಡ್ತಿ ಕೊಡುವುದು, ತಲಬು ನಿಶ್ಚಯಿಸುವುದು, ವರ್ಗಾವರ್ಗ ಮಾಡುವುದು, ನೌಕರರನ್ನು ಬರ್ಖಾಸ್ತ್ ಮಾಡುವುದು ಇತ್ಯಾದಿ ಎಲ್ಲವೂ ಪಬ್ಲಿಕ್ ಸರ್ವಿಸ್ ಕಮಿಷನ್ ಕೆಲಸವಾಗಿರುತ್ತದೆ. ಹೀಗಿರುವ ಅಧಿಕಾರಿಗಳಿಗೆ, ಸಾಮಾನ್ಯ ನೌಕರನಿಗೂ ಕೊಡಾ ಮಂತ್ರಿಗಳೆ ಹಂಗೇನು? ಅಡಳಿತ ದಿಗಿ ಇರುವುದಿಲ್ಲ. ಮಿಲಿಟರಿಯ ವಿಷಯಡಲ್ಲಿಯೂ ಪರಿಸ್ಥಿತಿ ಇದೇ ರೀತಿ ಇರುತ್ತದೆ. 'ಲಾ ಅಂಡ್ ಆರ್ಡರ್' [Law & Order] ದಪ್ತರು ಮಂತ್ರಿಗಳ ಸ್ವಾಧೀನವಿರುತ್ತದೆ. ದುರ್ದೈವದಿಂದ ಎಲ್ಲಿಯಾದರೂ ಒಂದು ಸ್ಥಳದಲ್ಲಿ ಗಲಾಟೆಯಾಗಿ ಅಶಾಂತಿಯುಂಟಾದರೆ ಆಗ ಗಲಾಟೆಯನ್ನು ತತ್ಕೋಟಿಗೆ ತಂದು ಶಾಂತಿ ಸ್ಥಾಪನೆ ಮಾಡಲು ಸಾಮಾನ್ಯ ಜನಗಳಿಂತೆ ಈ ಮಂತ್ರಿಗಳೂ ಸಹ ನೋಲ್ಪಟ್ಟವರ ಮುಖವನ್ನು ನೋಡುತ್ತಾ ಇರಬೇಕಾಗುತ್ತದೆ.

ವಸ್ತುಸ್ಥಿತಿಯು ಈ ರೀತಿ ಇರುವುದರಿಂದ ಈ ಮಂತ್ರಿಗಳ ಸ್ಥಾನವು ಹೆಚ್ಚು ಕಡಿಮೆ ಗ್ರಾಮುವಂಚಾಯಿತಿ ಅಧ್ಯಕ್ಷರಿಗಿಂತ ಏನಿಲ್ಲವಾದುದಲ್ಲ. 'ಪಕ್ಷಾಸಮರ್ಥತೆ ದೃಷ್ಟಿಯಿಂದ 'ಮಂತ್ರಿ' ಎಂಬ ಶಬ್ದವೇ ಘಾಸಕೆಯುಳ್ಳದ್ದು. ಹಿಟ್ಟಿನಲ್ಲಿ ಸದಾ ಬಿಕ್ಕಟ್ಟಿನ ಪರಿಸ್ಥಿತಿಯು ಇರುವುದರಿಂದ ಈ ಮಂತ್ರಿಮಂಡಲದ ರಚನೆಯು ನಿರುಪಯೋಗಿಯಾದುದು. ಇದರಿಂದ ದೇಶಕ್ಕೆ ಪ್ರಯೋಜನವಾಗುವ ಬದಲಿಗೆ, ಜನಗಳಲ್ಲಿ ಕೋಮುವಾರು, ಭೇದಭಾವನೆಯು ಹೆಚ್ಚಿ ಅದರಿಂದ ದೇಶಕ್ಕೆ ಹೆಚ್ಚು ಹಾನಿಯೇ ತಟ್ಟುವ ಸಂಭವವಿದೆ.

* * *

ಕೆಲಸ ಮಾಡಲಾಗದಂಥಾ ಮಂತ್ರಿಮಂಡಲವನ್ನು ಸಲಹೆಮಾಡಿ ಅದಕ್ಕೆ 'ಜವಾಬ್ದಾರಿ ಸರ್ಕಾರ' ವೆಂದು ನಾಮಕರಣ ಮಾಡುವುದು ಹುಹಾಸಾಹಸವು.

ಇನ್ನೊಬ್ಬ ರಾಜಕೀಯ ಧುರೀಣರು 'ಪೆಡ್ಡೂಲ್ ೧' ರಲ್ಲಿಯ ವಿಷಯಗಳ ವಿಚಾರವಾಯಿತು.

ಇನ್ನು ಈ ಮಂತ್ರಿಮಂಡಲವು ಬೇರೊಬ್ಬರ ಅಧೀನದ 'ಜೋಹುಕುಂ ವಾಲಾ' ಆಗುವ ಪರಿಸ್ಥಿತಿಯು 'ಷೆಡ್ಯೂಲ್ ೨' ರಿಂದ ಉತ್ಪನ್ನವಾಗುತ್ತದೆ.

(ಸಶೇಷ)

ಬಿಕೆಟಿಂಗ್ ಮತ್ತು ದಸ್ತಗಿರಿ

ಮೈಸೂರು ಲಾ ಕೋರ್ಟ್ ದ್ವಾರಗಳ ಬಳಿ 10 - 12 ಗಂಟೆವರೆಗೆ ಪಿಕೆಟಿಂಗ್ ನಡೆಯುತ್ತು.

ಮದ್ರಸ್ ವಕೀಲರಾದ ಶ್ರೀ ಜಯರಾಂ ರವರ ಸಹೋದರಿ ಶ್ರೀಮತಿ ಪ್ರಫುಲ್ಲ ದಸ್ತಗಿರಿಯಾದರು

ಸುಶೀಲಾದೇವಿ, ಲಕ್ಷ್ಮೀಸರಸಮ್ಮ ಮತ್ತಿತರರೂ ದಸ್ತಗಿರಿಯಾಗಿದ್ದಾರೆ

ಸತ್ಯವಾದಿ

ದಿನ ಪತ್ರಿಕೆ. ತಿಂಗಳಿಗೆ ಅಣಾ

ಕಾಲಮಹಿಮೆ

† ಮಾಧವ ಸ್ಮೃತಿಗಳ ಕಾಲದಲ್ಲಿ ಮೈಸೂರು ದೇಶವು ಎ. ಆರ್. ಪಿ ಐತಿಹ್ಯಗಳನ್ನು ಕಂಡುಕೊಂಡಿತು !

† ಆರ್ಕಾಟರ ಆಡಳಿತದಿಂದ ಮೈಸೂರಿಗೆ ಕಷ್ಟ್ಯೂ ಕಷ್ಟ ಚನ್ನಾಗಿ ಮನದಟ್ಟಾಯಿತು !

† ಕಾಲ ಮಹಿಮೆಯನ್ನಿನ್ನೇನು ಬಣ್ಣಿಸಲಿ ?! ವೈಭವಯುತ 'ನವರಾತ್ರಿ' ಜಾಲೀ ಒಂಬತ್ತು ರಾತ್ರಿಗಳಾಗಿ ಹತ್ತಿವೆ !!

'ಕಾಲಭೈರವ'

ವುಡ್ ಲ್ಯಾಂಡ್ಸ್

ಆಮೋಘ 2 ನೇ ವಾರ

ರಂಜನ — ಚೀರ್ಫ — ಬೇಬಿ ಮಾಧುರಿ

ಸ್ಥಾಶ್ರವಹಿಸಿರುವ

ನೈಮಾ

(ಆಮೋಘ ಹಿಂದಿ ಚಿತ್ರ)

ಪ್ರತಿದಿನ 3 ಆಟಿಗಳು

At Opera
From 4–10–47
PHANTOM
(Serial)

Edited, Printed and Published by M. S Krishna Rao at the Satyavadi Press Chamarja Agrahar Mysore.

ಸುದ್ದಿಗಳು

ಭಾರತ ಡೊಮಿನಿಯನ್ನಿನಲ್ಲಿರು ತನ್ನ ಅ ಸಂಖ್ಯಾತರೊಂಗಳೆಲ್ಲರೂ ಆ ಡೊಮಿನಿಯನ್ನಿ ನಿ ರಾಜಭಕ್ತಿಯುಳ್ಳವರಬೇಕೆಂದು ಮತ ಗುರು ಆಗಾಖಾನರು ಮಾರ್ಸೆಲ್ಸಿನಿಂದ ಬೊಂಬಾಯಿಗೆ ತಂತಿ ಕಳಿಸಿದ್ದಾರೆ

ಅಖಿಲ ಭಾರತ ಮೊವಿಣ ಪಂಷತ್ತಿನ ಅಧ್ಯಕ್ಷರೂ ಮತ್ತು ಬಿಹಾರ್ ಪುನರ್ರಚನಾ ಸಚಿವರು ಆದ ಜ || ಅಬ್ದುಲ್ ಕ್ವಾಯಂ ಅನ್ಸಾರಿ ಪಾಕೀಸ್ತಾನ ಮುಸ್ಲಿಂರಿಗೆ ಮಾಡಿರುವ ಮನವಿಯಲ್ಲಿ ಮತ್ತೆ ಭಾರತದೊಡನೆ ಐಕ್ಯರಾಗಿಯೆಂದು ತಿಳಿಸಿರುವುದಾಗಿ ಕಲ್ಕತ್ತ ನಂದಿ.

ಕರಾಚಿ — ಸಿಂಧಿ ಮುಸ್ಲಿಂ ಮತ್ತು ಹಿಂದೂಗಳ ಜಂಟಿ ಸಭೆ ಕರಾಚಿಯ ಸುಕ್ಕೂರಿನಲ್ಲಿ ನಡೆಯಿತು. ಅಲ್ಪ ಸಂಖ್ಯಾತರಾದ ಹಿಂದೂಗಳನ್ನು ರಕ್ಷಣೆ ಮಾಡುತ್ತೇವೆ ಎಂದು ಮುಸಲ್ಮಾನರು ಖುರ್ರಾ ಮುಟ್ಟಿ ಪ್ರಮಾಣ ಮಾಡಿದ್ದಾರೆ.

ಹೊಷಿಯಾಪುರ ಜಿಲ್ಲೆ ಮತ್ತು ಬಾಸುವೆಟಿಪಿಲ್‌ಗಳಲ್ಲಿ ಹಿಂದೂಗಳು ಮತ್ತು ರಜಪೂತ್ ಸಿಕ್ಖರು ಸೇರಿ ಮುಸ್ಲಿಂರಿಗೆ ಸಂಪೂರ್ಣ ರಕ್ಷಣೆಯಿತ್ತಿದ್ದಾರೆ. ಅನೇಕ ಮುಸ್ಲಿಂರು ಹಿಂದೂಸರದಾರರನ್ನು ನಂಬಿ ಮನೆಯ ಬೀಗದಕೈಗಳನ್ನು ಕೊಟ್ಟಿದ್ದಾರೆ.

ಭಾರತದ ಮುಸ್ಲಿಂ ಲೀಗ್ ವಿಸರ್ಜಿಸಿ ಮುಸ್ಲಿಂರೆಲ್ಲರೂ ಕಾಂಗ್ರೆಸ್ ಸೇರಬೇಕೆಂದು ಬರಾರಿನ ಮಾಜಿ ಮಂತ್ರಿ ಜ || ಹಾರ್ಡ ನಾಗಪುರದಿಂದ ಪತ್ರಿಕಾ ಹೇಳಿಕೆಯಿತ್ತಿದ್ದಾರೆ.

ನನ್ನ ಜೀವವಿರುವ ವರೆಗೆ ಅಲ್ಪಸಂಖ್ಯಾತ ಹಿಂದೂ ರಕ್ಷಣೆ ಮಾಡುತ್ತೇನೆ ಎಂದು ಕಾಶ್ಮೀರದ ಶ್ರೀ ಗಂದಿಂದ ಸಂಸ್ಥಾನ ಪುಷತ್ತಿನ ಅಧ್ಯಕ್ಷ ಷೇಕ್ ಅಬ್ದುಲ್ಲ ಭರವಸೆಯಿತ್ತಿದ್ದಾರೆ.

SHAKTI
SUDHA
A Superb TONIC

ನೋಟೀಸ್

ಮೈಸೂರು ಸಿಟಿ ಮುನಿಸಿಪಲ್ ಹೆಲ್ತ್ ಇಲಾಖೆಗೆ ಕಚೇರಿಗಳ ಉಪಯೋಗಕ್ಕಾಗಿ ಐದು ಜೊತೆ ಎತ್ತುಗಳು ಬೇಕಾಗಿರುವುದರಿಂದ ಮಾಲೀಕರುಗಳು ಪುಷ್ಟಿಕರವಾದ ಮತ್ತು ಸರಿಯಾದ ವೈಸಿನ ಎತ್ತುಗಳನ್ನು ಬಿಕ್ರಿಗಾಗಿ ತಾರೀಜು 16–10–47 ನೇ ಗುರುವಾರ ಸಾಯಂಕಾಲ ಮುನಿಸಿಪಲ್ ಆಫೀಸಿಗೆ ಹಾಜರಾಗಿಡಬಹುದು. ಖರೀದಿ ನಿಷ್ಕರ್ಷೆಯಾದ ಕೂಡ್ಲೇ ಮೊಬಲಗು ಪಾವತಿಮಾಡಲಾಗುತ್ತೆ.

(ಸಹಿ) ಇ. ಅನಂತರಾವ್
ಹೆಲ್ತ್ ಆಫೀಸರ್
ಮೈಸೂರು ಸಿಟಿ

2–10–47

SAVE THE COW

ಶ್ರೀ 'ಓಂ' ಗುರುತಿನ
ಅರಿಸಿದ ಪರಿಶುದ್ಧ ಕೇಸರಿ

ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯ ಕೇಸರಿ ಗಿಡಗಳಿಂದ ಆರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು ಆರಿಸ ತೆಗೆಯಲ್ಪಟ್ಟಿದಾಗಿದೆ. ಇದಂಲ್ಲಿ ಏನೆಂದು ಆಕ್ಷೇಪಣೀಯ ಪದಾರ್ಥವೂ ಸೇರಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾದುದು. ದೇವಾಲಯಗಳಲ್ಲಿಯೂ ದೇವರ ಪೂಜೆಗೂ ಮತಾಚಾರ ಸಮಾರಂಭಗಳಲ್ಲಿಯೂ ಎಲ್ಲ ಸಂತೋಷ ಮತ್ತು ಸಾಂಘಿಕ ಕೂಟಗಳಲ್ಲಿಯೂ ಉಪಯೋಗಿಸಲ್ಪಡತ್ತದ್ದಾಗಿದೆ. ಎಂದು ಶಿಫಾರಸ್ ಮಾಡಲ್ಪಟ್ಟಿದೆ

ವಲ್ಲಭದಾಸ್ ತೇಜ್‌ಪಾಲ್
(ಹಿಂಗು. ಕೇಸರಿ ಮತ್ತು ಕಿರಣ ವ್ಯಾಪಾರಿಗಳು)
ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು